ಕಾರಣಕ್ಕಾಗಿ ಇರಬಹುದು. ಸರಳವಾದ ಸನ್ನಿವೇಶಗಳನ್ನು ಕತೆಗಳನ್ನು ಮುಂದೆಮಾಡಿ ಮಹತ್ತರವಾದ ವಿಷಯಗಳನ್ನು ನಿರೂಪಿಸುವ, ಚರ್ಚಿಸುವ ಹಾಗೂ ಮನಗಾಣಿಸುವಲ್ಲಿ ಅಬ್ಬಾಸ್ ಕಯರೋಸ್ತಾಮಿ ಅವರದ್ದು ಎತ್ತಿದ ಕೈ. ಅವರ ಸಿನಿಮಾಗಳು ಭಾರತದ ಗಂಭೀರ ಸಿನಿಮಾಸಕ್ತರ ನಡುವೆ ಬಹಳ ಜನಪ್ರಿಯ ಕೂಡ. ಹಾಗೆಯೇ ಮೋಶಿನ್ ಮ್ಯಾಕ್ಮಲ್ಬಫ್, ಜಫರ್ ಫನಾಹಿ, ಮಜೀದ್ ಮಜಿದಿಯಂತಹ ನಿರ್ದೇಶಕರ ಸಿನಿಮಾಗಳು ಕೂಡ ಭಾರತೀಯ ಸಿನಿಮೋತ್ಸವಗಳಲ್ಲಿ ಪ್ರದರ್ಶನ ಕಂಡು ಜನರ ಮನದಲ್ಲಿ ಜಾಗ ಪಡೆದಿವೆ. ಇವೆಲ್ಲವಕ್ಕು ಆದಿಯಾಗಿ ಇರಾನಿನ ಹಾಗೂ ಭಾರತದ ಮೊದಲ ವಾಕ್ಚಿತ್ರವನ್ನು ನಿರ್ದೇಶಿಸಿದವನು ಇರಾನ್‌ನ ಆರ್ದೇಶಿರ್ ಇರಾನಿ ಎಂಬುವುದು ಕೂಡ ವಿಶೇಷ. ಈ ಎಲ್ಲಾ ದೈತ್ಯ ಪ್ರತಿಭೆಗಳ ನಡುವೆ ಸ್ವಲ್ಪ ಇತ್ತೀಚಿನವರು ಎನ್ನಬಹುದಾದ, ಬಹಳ ಸಂಕೀರ್ಣವಾದ ಕತೆಗಳನ್ನು ತೆರೆಯ ಮೇಲೆ ಮೂಡಿಸುವ ಕೌಶಲ್ಯಕ್ಕೆ ಅಸ್ಗರ್ ಪರ್ಹಾದಿ ದೊಡ್ಡ ಹೆಸರು. ಸತತ ಎರಡನೇ ಬಾರಿಗೆ ಆಸ್ಕರ್ ಅತ್ಯುತ್ತಮ ವಿದೇಶಿ ಚಿತ್ರ ಪ್ರಶಸ್ತಿಗೆ ಪಾತ್ರವಾದ ಫರ್ಹಾದಿ ಅವರ 'ದ ಸೇಲ್ಸ್ ಮ್ಯಾನ್', 2016–17ರ ಮಹತ್ವದ ಜಾಗತಿಕ ಸಿನಿಮಾಗಳಲ್ಲಿ ಒಂದು. (ಈ ಹಿಂದೆ ಅವರ 'ದ ಸಪರೇಶನ್' ಸಿನಿಮಾ ಇದೇ ಪ್ರಶಸ್ತಿ ಬಂದಿತ್ತು). 'ದ ಸೇಲ್ಸ್ ಮ್ಯಾನ್' ಕಾನ್ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡ ಸಿನಿಮಾ.

ವಿಶ್ವದ ಬಹುತೇಕ ಆಧುನಿಕ ನಗರಗಳಲ್ಲಿ ವಾಸಿಸುವ ಮಧ್ಯಮವರ್ಗದ ಜನತೆಯ ಕೆಲವು ಸಾಮಾನ್ಯ ಗುಣಲಕ್ಷಣಗಳು ಯಾವುವು ಎಂದರೆ, ತಕ್ಷಣಕ್ಕೆ ಹೊಳೆಯುವುದು – ವೇಗದ ಜೀವನ, ಆತಂಕದ ಬದುಕು, ಮತ್ತೊಬ್ಬರ ಮೇಲೆ ಅಪನಂಬಿಕೆ, ನೈತಿಕತೆಯ ಬಗ್ಗೆ ಅಗತ್ಯಕ್ಕಿಂತಲೂ ಹೆಚ್ಚಿನ ಎಚ್ಚರದ ಮನೋಭಾವ, ನೆರೆಹೊರೆಯವರ ಬಗ್ಗೆ ಗುಮಾನಿಯ ಬದುಕು... ಹೀಗೆ ಆಯಾ ಭೂಪ್ರದೇಶಕ್ಕೆ ಮತ್ತು ಒಳಪಟ್ಟಿರುವ ರಾಜಕೀಯ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದೇ ರೀತಿ ಆ ವರ್ಗದ ಆರ್ಥಿಕ ಶಕ್ತಿಗೆ ಅನುಗುಣವಾದ ಲಕ್ಷಣಗಳನ್ನು ಅಥವಾ ಗೊಂದಲಗಳನ್ನು ಪಟ್ಟಿ ಮಾಡುವುದಾದರೆ, ಸ್ವಂತ ಮನೆ ಹೊಂದುವ ಮಹದಾಸೆ, ಮಕ್ಕಳನ್ನು ಹೆರುವ ಬಗ್ಗೆ ಗೊಂದಲ... ಹೀಗೆ ಪಟ್ಟಿಗೆ ಇನ್ನಷ್ಟು ಸೇರಿಸಬಹುದು. ಇವೆಲ್ಲವೂ ಋಣಾತ್ಮಕವಾದವು ಎಂದೇನಲ್ಲ ಅಥವಾ ಇವೆಲ್ಲಾ ಗುಣಗಳು ಮಧ್ಯಮವರ್ಗದ ಜನರಲ್ಲಿ ಕಾಯಂ ಮನೆಮಾಡಿರುತ್ತವೆ ಎಂಬ ಅಂಶ ಕೂಡ ವಿಧಿಲಿಖಿತವೇನಲ್ಲ. ಆದರೆ ಒಂದಲ್ಲ

| | | |
|---|---|---|
| ಚಿತ್ರ | : | ದ ಸೇಲ್ಸ್ ಮ್ಯಾನ್ |
| ನಿರ್ದೇಶನ | : | ಅಸ್ಗರ್ ಪರ್ಹಾದಿ |
| ನಿರ್ಮಾಣ | : | ಅಲೆಕ್ಸಾಂಡ್ರೆ ಮಲ್ಲೆಟ್–ಗೈ ಮತ್ತು ಅಸ್ಗರ್ ಪರ್ಹಾದಿ |
| ಛಾಯಾಗ್ರಹಣ | : | ಹುಸೈನ್ ಜಫ್ರಿನ್ |
| ಭಾಷೆ | : | ಪರ್ಶಿಯನ್ |
| ದೇಶ | : | ಇರಾನ್ |